

# सरयू

# ಸರಯೂ

## ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**July Vol. : 11 Issue : 2** 5126/ ಕ್ರೋಧಿ ಸಂವತ್ಸರ ಜುಲೈ 2024 ಪುಟ 4 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24







## ಶ್ರೀರಾಮ ಪ್ರೌಢಶಾಲಾ ಆಗತ ಸ್ವಾಗತ ಕಾರ್ಯಕ್ರಮ 20.06.2024

ಶ್ರೀರಾಮ ಪ್ರೌಢಶಾಲೆ ನೂತನವಾಗಿ ಸೇರ್ಪಡಗೊಂಡ ವಿದ್ಯಾರ್ಥಿಗಳ ಆಗತ ಸ್ವಾಗತ ಕಾರ್ಯಕ್ರಮದಲ್ಲಿ ಡಾ. ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ಕೆ ದಾಮೋದರ ರೆಡ್ಡಿ ಆಡಳಿತ ಪಾಲುದಾರರು ಶ್ರೀ ಕೃಷ್ಣ ವೆಂಚರ್ಸ್ ಬೆಂಗಳೂರು, ಶ್ರೀಮತಿ ಗೌರಮ್ಮ ದಾಮೋದರ ರೆಡ್ಡಿ. ಶ್ರೀ ಗೌತಮ್ ಕಮ್ಮಾಜೆ ನಿರ್ದೇಶಕರು ಸೋನಾ ಗ್ರೂಪ್ ಆಫ್ ಇಂಡಸ್ಟ್ರಿ ಬೆಂಗಳೂರು ಶ್ರೀ ವಿಕಾಸ್ ತೋಳಾರ್ (ಕೃಷಿ ಉದ್ಯಮಿಗಳು, ಕಟೀಲ್ ಮಂಗಳೂರು), (ಆಡಳಿತ ಪಾಲುದಾರರು, ಶ್ರೀ ಕೃಷ್ಣ ವೆಂಚರ್ಸ್ ಬೆಂಗಳೂರು) ಅವರ ಪುತ್ರರಾದ ನಿತಿನ್ ಡಿ ಮತ್ತು ಸಚಿನ್ ಡಿ ಹಾಗೂ ಸಚಿನ್ ಡಿ ಅವರ ಧರ್ಮಪತ್ನಿ ವಿನುತಾ.ಎಸ್. ಮತ್ತು ಕೆ. ದಾಮೋದರ ರೆಡ್ಡಿ ಅವರ ಸಹೋದರಿಯಾದ ಗೌರಮ್ಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಹ ಸಂಚಾಲಕರಾದ ರಮೇಶ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ, ಉಪಸ್ಥಿತರಿದ್ದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಆರತಿ ಬೆಳಗಲಾಯಿತು. ಈ ವಿದ್ಯಾರ್ಥಿಗಳು ಅಗ್ನಿಹೋತ್ರಕ್ಕೆ ಘೃತಾಹುತಿ ಮಾಡಿ, ಭಾರತಾಂಬೆಗೆ ಪುಷ್ಪಾರ್ಚನೆ ಮತ್ತು ಹಿರಿಯರಿಂದ ತಿಲಕ ಧಾರಣೆ ಮಾಡಿ ಆಶೀರ್ವಾದ ಪಡೆದುಕೊಂಡರು.

2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಭೂಷಣ್, ನಿಖಿತಾ ಮತ್ತು ಆಕಾಶ್ ಇವರನ್ನು ಗೌರವಿಸಲಾಯಿತು.

## ದೀಪ ಪ್ರದಾನ" 18.06.2024"

ಶ್ರೀರಾಮ ಪದವಿ ಮಹಾವಿದ್ಯಾಲಯದ 13ನೇ ವರ್ಷದ ಅಂತಿಮ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ– "ದೀಪ ಪ್ರದಾನ" ಕಾರ್ಯಕ್ರಮವು ಆಜಾದ್ ಭವನದಲ್ಲಿ ನಡೆಯಿತು.

ಡಾ. ಪ್ರಭಾಕರ ಭಟ್ ಕಲ್ಲಡ್ಕ – ಜಮ್ಮುಕಾಶ್ಮೀರ ಸರಕಾರದ ಪ್ರಧಾನ ಕಾರ್ಯದರ್ಶಿ ಎಚ್ ರಾಜೇಶ್ ಪ್ರಸಾದ್, ಉಡುಪಿಯ ಶಾಸಕ ಶ್ರೀ ಯಶಪಾಲ್ ಸುವರ್ಣ, ಮಂಗಳೂರು ಯುನಿವರ್ಸಿಟಿಯ ಸಿಂಡಿಕೇಟ್ ಸದಸ್ಯ ಡಾ. ಕೆ. ಸಿ ಮಹದೇಶ್ ಹಾಗೂ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕ ಶ್ರೀ ವಸಂತ ಮಾಧವ, ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯೆ ಶ್ರೀಮತಿ ಡಾ. ಕಮಲಾ ಪ್ರಭಾಕರ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ವೇದಿಕೆಯಲ್ಲಿ ಉಪಸ್ಥಿತರಿದ್ದು ಅಂತಿಮ ಪದವಿ ವಿದ್ಯಾರ್ಥಿಗಳ ಸಾಧನೆಯ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಆರತಿ ಬೆಳಗಿ ತಿಲಕವಿಟ್ಟು ಹರಸಲಾಯಿತು. ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ದೀಪಪ್ರದಾನ ಮಾಡಿದರು.







## ಶ್ರೀರಾಮ ಸೆಕೆಂಡರಿ ಸ್ಕೂಲ್ (ಇಂಗ್ಲೀಷ್ ಮೀಡಿಯಂ) – ಕಲ್ಲಡ್ಕ



ತೀರ್ಥ ಶೆಟ್ಟಿ

**2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ – 2ರಲ್ಲಿ 625ರಲ್ಲಿ 621 ಅಂಕ ಗಳಿಸಿ ಶೇ 99.36ರೊಂದಿಗೆ ಶಾಲೆಗೆ ಪ್ರಥಮ ಸ್ಥಾನ, ತಾಲೂಕಿಗೆ ದ್ವಿತೀಯ ಸ್ಥಾನ ಮತ್ತು ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿರುತ್ತಾರೆ.**

**ಸಮಾಜ ಮತ್ತು ಹಿಂದಿ ವಿಷಯದಲ್ಲಿ 100ರಲ್ಲಿ 100 ಅಂಕ ಗಳಿಸಿರುತ್ತಾರೆ.**

**99.36%**

**621 / 625**

ಅಭಿನಂದನೆಗಳು

ಶ್ರೀರಾಮ ವಿದ್ಯಾಕೇಂದ್ರ ಆಡಳಿತ ಮಂಡಳಿ, ಅಧ್ಯಾಪಕ, ಅಧ್ಯಾಪಕೇತರ ವೃಂದ



**ಆಗತ ಸ್ವಾಗತ, ಹಿಂದೂ ಸಾಮ್ರಾಜ್ಯೋತ್ಸವ ಹಾಗೂ ವಿಶ್ವ ಯೋಗ ದಿನಾಚರಣೆ 21.6.24**

ಕಾರ್ಯಕ್ರಮದಲ್ಲಿ ಡಾ.ಕಮಲಾ ಪ್ರಭಾಕರ್ ಭಟ್ ಹಾಗೂ ಶ್ರೀಮತಿ ವಿಜಯ ಪ್ರಭು ಉಪಸ್ಥಿತರಿದ್ದು ಶುಭ ಹಾರೈಸಿದರು. ವಸತಿ ನಿಲಯದ ಮಾತಾಜಿ ಶ್ರೀಮತಿ ಹರ್ಷಿತಾ ಮಕ್ಕಳಿಗೆ ಆರತಿ ಬೆಳಗಿ ಸ್ವಾಗತಿಸಿದರು.



**ಸಾಮೂಹಿಕ ಹುಟ್ಟುಹಬ್ಬ 29.6.2024**

ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಶ್ರೀ ಮನೋಜ್ ಬಂಗೇರ ಉಳ್ಳಾಲ ಹಾಗೂ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ದೇವಿಕಾ ಮಾತಾಜಿ ಹುಟ್ಟುಹಬ್ಬದ ಬಗ್ಗೆ ಮಾತನಾಡಿದರು.



**ಪ್ರವೇಶೋತ್ಸವ 25.6.2024**

ಶ್ರೀಕೃಷ್ಣ ಶಿಶುಮಂದಿರ ಸಜೀಪ ಕಂದೂರಿನಲ್ಲಿ ನಡೆದ ಮಕ್ಕಳ ಪ್ರವೇಶೋತ್ಸವದಲ್ಲಿ ಮಕ್ಕಳಿಗೆ ಆರತಿ ಬೆಳಗಿ, ತಿಲಕ ಇಟ್ಟು ಅಕ್ಷತೆ ಹಾಕಿ ಮಕ್ಕಳನ್ನು ಸ್ವಾಗತಿಸಲಾಯಿತು. ಒಟ್ಟು 27 ಮಕ್ಕಳು ಉಪಸ್ಥಿತರಿದ್ದರು.

## – ಪ್ರಾಥಮಿಕ ಶಾಲೆ –



**ವಿಶ್ವ ಪರಿಸರ ದಿನ : 5.06.2024**

ಕಾರ್ಯಕ್ರಮದಲ್ಲಿ ಸುದೆಕ್ಕಾರು ರಕ್ತೇಶ್ವರಿ ಸನ್ನಿಧಿಯ ವಠಾರದಲ್ಲಿ ಬಂ.ವಲಯ ಅರಣ್ಯಾಧಿಕಾರಿ ಶ್ರೀಪ್ರಫುಲ್ ಶೆಟ್ಟಿ, ಉಪ ಅರಣ್ಯಾಧಿಕಾರಿ ಶ್ರೀ ರವಿರಾಜ್ ಬಿ, ಮಾಣಿ ವಲಯ ಗಸ್ತು ವನಪಾಲಕರಾದ ಶ್ರೀ ರಾಘವೇಂದ್ರ, ಶ್ರೀ ಜಯರಾಮ ಸುದೆಕ್ಕಾರು, ಶ್ರೀ ಪಿ ಕೆ ಪದ್ಮನಾಭ, ವಿಜ್ಞಾನ ಸಂಘದ ವಿದ್ಯಾರ್ಥಿಗಳ ಜೊತೆಗೂಡಿ ಗಿಡವನ್ನು ನೆಟ್ಟರು.



**ವಿಶ್ವ ಬಾಲಕಾರ್ಮಿಕ ವಿರೋಧಿ ದಿನ: 12.6.24**

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ದಿನದ ಮಹತ್ವವನ್ನು ಅಧ್ಯಾಪಕರಾದ ಶ್ರೀ ಬಾಲಕೃಷ್ಣ ಇವರು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ನಿರ್ಮೂಲನೆ ಕುರಿತಾದ ಘೋಷ ವಾಕ್ಯವನ್ನು ಪ್ರದರ್ಶಿಸಲಾಯಿತು.



**ಒರಿಗಾಮಿ ಸಂಗ್ರಹ ವೀಕ್ಷಣೆ : 15.06.2024**

ಛತ್ರಪತಿ ಶಿವಾಜಿ ಮಹಾರಾಜ್ ವಸ್ತು ಸಂಗ್ರಹಾಲಯ, ಮುಂಬೈಯವರ ಆಯೋಜನೆಯಲ್ಲಿ ಬಿ.ಸಿರೋಡ್ ಮಿನಿ ವಿಧಾನಸೌಧದ ಎದುರುಗಡೆ ನಡೆದ ಮ್ಯೂಸಿಯಂ ಆನ್ ವೀಲ್ಸ್ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ 51 ವಿದ್ಯಾರ್ಥಿಗಳ ಭಾಗವಹಿಸಿ, ಒರಿಗಾಮಿ ಸಂಗ್ರಹಗಳನ್ನು ವೀಕ್ಷಿಸಿ ಚಟುವಟಿಕೆಗಳನ್ನು ಮಾಡಿದರು.



**ಡೆಂಗ್ಯೂ ಮಾಹಿತಿ : 19.09.2024**

ವಿದ್ಯಾರ್ಥಿಗಳಿಗೆ "ಡೆಂಗ್ಯೂ ಮತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ಬಾಳ್ತಿಲ ಪ್ರಾಥಮಿಕ ಅರೋಗ್ಯ ಕೇಂದ್ರದ ವತಿಯಿಂದ ಮಾಹಿತಿ ಕಾರ್ಯಗಾರವನ್ನು ಶುಶ್ರೂಷಕಿ ಶ್ರೀಮತಿ ಸರಸ್ವತಿ ಇವರು ನಡೆಸಿಕೊಟ್ಟರು.



**ಯಕ್ಷಗಾನ ತರಬೇತಿ ಉದ್ಘಾಟನೆ : 22.06.2024**

ಯಕ್ಷಗಾನ ತರಬೇತಿ ತರಗತಿಯು ತರಬೇತುದಾರರಾದ ಗಣೇಶ್ ಆಚಾರ್ಯ ಕೊಂದಲಕೋಡಿ ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸುಮಂತ್ ಆಳ್ವ ಎಂ, ಅಧ್ಯಾಪಕರಾದ ಬಾಲಕೃಷ್ಣ ಹಾಗೂ ಹೇಮಲತಾ ಉಪಸ್ಥಿತರಿದ್ದರು.



**ಅಭಿನಂದನೆ : 22.06.2024**

2024–25ನೇ ಶೈಕ್ಷಣಿಕ ವರ್ಷದ ಶಾಲಾ ಸಂಸತ್ ಚುನಾವಣೆ ನಡೆದಿದ್ದು, ವಿಜೇತರಾದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು. ಶಾಲಾನಾಯಕಿಯಾಗಿ ಭೂಮಿಕಾ, ನಾಯಕನಾಗಿ ಶಶಾಂಕ್, ಹಾಗೂ ಇತರ ಸಂಸತ್ತು ಸದಸ್ಯರನ್ನು ಅಭಿನಂದಿಸಲಾಯಿತು.

## – ಪ್ರೌಢಶಾಲೆ –



**ವಿಶ್ವ ಪರಿಸರ ದಿನಾಚರಣೆ 5.06.2024**

ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ತುಳಸಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 2024–25 ನೇ ಸಾಲಿನ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಮತ್ತು ಉಚಿತ ಸಮವಸ್ತ್ರ ವಿತರಿಸಲಾಯಿತು.



**ಹಿಂದೂ ಸಾಮ್ರಾಜ್ಯ ದಿನೋತ್ಸವ 19.06.2024**

ಶ್ರೀ ರಾಧಾಕೃಷ್ಣ ಅಡ್ಯಂತಾಯ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಶ್ರೀ ಮಹಾಬಲ ಕಲ್ಲಡ್ಕ. ಮುಖ್ಯೋಪಾಧ್ಯಾಯರು ಗೋಪಾಲ್ ಶ್ರೀಮಾನ್ ಇವರು ಉಪಸ್ಥಿತರಿದ್ದರು.



**ಯಕ್ಷಧ್ರುವ ಯಕ್ಷಶಿಕ್ಷಣ ತರಬೇತಿ 25.062024**

ಯಕ್ಷಧ್ರುವ ಪಟ್ಲ ಫೌಂಡೇಶನ್ ಇದರ ವಿಟ್ಲ ಘಟಕದ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ಶೆಟ್ಟಿ ಚೆಲ್ಲಡ್ಕ, ಶ್ರೀ ಪಿ ಪೂವಪ್ಪ ಶೆಟ್ಟಿ, ಶ್ರೀ ಸುಜಿತ್ ಕುಮಾರ್, ಪ್ರೌಢಶಾಲಾ ಮುಖ್ಯೋಪಾಧ್ಯಾರು ಉಪಸ್ಥಿತಿಯಲ್ಲಿ ತರಭೇತಿ ಪ್ರಾರಂಭಗೊಂಡಿತು.

## ಸುಭಾಷಿತ ಮಂಜರಿ

ಧೀರಾಃ ಶೋಕಂ ಕರಿಷ್ಯಂತಿ
ಲಭಂತೇ ಸಿದ್ಧಿಮುತ್ತಮಮ್।
ಧೀರೈಃ ಸಂಪ್ರಾಪ್ಯತೇ ಲಕ್ಷ್ಮೀಃ
ಧೈರ್ಯಂ ಸರ್ವತ್ರ ಸಾಧನಮ್ ।
ಧೀರರು ಸುಲಭವಾಗಿ ಸಂಕಟದಿಂದ
ಪಾರಾಗುತ್ತಾರೆ, ಸಿದ್ಧಿಯನ್ನು ಪಡೆಯುತ್ತಾರೆ.
ಐಶ್ವರ್ಯವೂ ಅವರಿಗೇ ಲಭಿಸುತ್ತದೆ.
ಧೈರ್ಯವೇ ಎಲ್ಲವನ್ನು ಸಾಧಿಸುತ್ತದೆ.

ಸಂಪಾದಕೀಯ

ವಂದನೆಗಳೊಂದಿಗೆ

ಆಗತ-ಸ್ವಾಗತದೊಂದಿಗೆ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಇದೇ ಮೊದಲ ಬಾರಿಗೆ ಅತ್ಯಂತ ಹೆಚ್ಚು ಅಂಕ ಗಳಿಸಿದ ಹೆಮ್ಮೆ, ವಿಶ್ವಯೋಗ ದಿನ, ಹಿಂದೂ ಸಾಮ್ರಾಜ್ಯ ದಿನೋತ್ಸವ, ಪರಿಸರ ದಿನಗಳಂತಹ ಸಾಮಾಜಿಕ ಪ್ರಜ್ಞೆಯ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಅಲ್ಲದೇ ಮಾಸಿಕವಾಗಿ ನಡೆಯುವ ಭಜನೆ, ಹುಟ್ಟುಹಬ್ಬ ಇತ್ಯಾದಿ ಕಾರ್ಯಕ್ರಮಗಳೊಂದಿಗಿನ ಸರಯೂ ಇದಾಗಿದೆ.

ವರ್ಷಕಾಲವಾದ್ದರಿಂದ ಅಲ್ಲಲ್ಲಿ ಶೈಕ್ಷಣಿಕ ಚಟುವಟಿಕೆಗಳ ಮಧ್ಯೆ ಮಳೆಯ ಕಾರಣ-ಕ್ಕೆ ರಜೆಗಳು ಕೆಲವೊಂದು ಅಡೆತಡೆಗಳಿದ್ದರೂ ಶಾರೀರಿಕ ಚಟುವಟಿಕೆಗಳು ಎಗ್ಗಿಲ್ಲದೆ ನಡೆ-ಯುತ್ತಿದೆ, ಜುಲೈ ತಿಂಗಳ ಆರಂಭದಿಂದಲೇ ಕ್ರೀಡಾ ಸ್ಪರ್ಧೆಗಳು ಆರಂಭವಾಗುತ್ತಿದ್ದು, ಭರದ ತಯಾರಿ ನಡೆಯುತ್ತಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ಶ್ವೇತಾ (ಪಿಯುಸಿ)
ಸೌಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


### ಯೋಗ ದಿನಾಚರಣೆ 21.06.2024

ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಿತ ಶಿಶುಮಂದಿರಗಳಾದ ಶ್ರೀ ಗಣೇಶ ಶಿಶುಮಂದಿರ ಬೊಂಡಾಲ, ಶ್ರೀ ಕೃಷ್ಣ ಶಿಶುಮಂದಿರ ಸಜೀಪ ಕಂದೂರು, ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿಗಳಲ್ಲಿ ಮಕ್ಕಳಿಂದ ಸುಲಭವಾದ ಯೋಗಾಸನಗಳನ್ನು ಮಾಡಿಸಿ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು.

### ಪ್ರವೇಶೋತ್ಸವ 21.6.2024



ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿಯಲಿ ನಡೆದ ಮಕ್ಕಳ ಪ್ರವೇಶೋತ್ಸವದಲ್ಲಿ ಮಕ್ಕಳಿಗೆ ಆರತಿ ಮಾಡಿ ತಿಲಕ ಇಟ್ಟು ಅಕ್ಷತೆ ಹಾಕಿ ಸಿಹಿ ಹಂಚಿ ಸ್ವಾಗತಿಸಲಾಯಿತು. ಒಟ್ಟು 12 ಮಕ್ಕಳು ಉಪಸ್ಥಿತರಿದ್ದರು.

### ಪ್ರವೇಶೋತ್ಸವ 25-6-2024



ಶ್ರೀಗಣೇಶ ಶಿಶುಮಂದಿರದ ಮಕ್ಕಳ ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಆರತಿ ಮಾಡಿ, ತಿಲಕ ಇಟ್ಟು, ಅಕ್ಷತೆ ಹಾಕಿ ಸಿಹಿ ನೀಡಿ ಸ್ವಾಗತಿಸಲಾಯಿತು. ಶ್ರೀಮತಿ ರೇಖಾ ಮಾತಾಜಿ ಮತ್ತು ಕಮಿಟಿ ಸದಸ್ಯರಾದ ಶ್ರೀಮತಿ ಜಯಶ್ರೀ ಮತ್ತು ಶ್ರೀ ಜನಾರ್ಧನ ಕುಲಾಲ್ ಭಾಗವಹಿಸಿದ್ದರು. ಒಟ್ಟು 11 ಮಕ್ಕಳು ಉಪಸ್ಥಿತರಿದ್ದರು.

## ಪ್ರಾಥಮಿಕ ವಿಭಾಗ

### ವಿಚಾರಣಾ ಸಂಕಿರಣದಲ್ಲಿ ಭಾಗಿ: 1.6.24

ಶ್ರೀರಾಮ ವಿದ್ಯಾಕೇಂದ್ರವು ಪ್ರತಿವರ್ಷವೂ ಹಮ್ಮಿಕೊಳ್ಳುವ, ಶ್ರೀರಾಮ ಪದವಿ ಕಾಲೇಜಿನ ಆಶ್ರಯದಲ್ಲಿ ನಡೆಯುವ ರಾಷ್ಟ್ರೀಯ ವಿಚಾರ ಸಂಕಿರಣವು (12ನೇ) "ಸ್ವಸ್ಥ ಭಾರತಕ್ಕಾಗಿ ಸ್ವಚ್ಛಪರಿಸರ" ಎಂಬ ವಿಷಯದ ಕುರಿತು ಪದವಿ ವಿಭಾಗದ ಆಜಾದ್ ಭವನದಲ್ಲಿ ನಡೆಯಿತು.

### ವಾರ್ಷಿಕ ಪೂಜೆ : 3.06.2024

ವಿದ್ಯಾಕೇಂದ್ರದ ನಾಗ ರಕ್ತೇಶ್ವರಿ ಸಾನಿಧ್ಯದಲ್ಲಿ ಬೆಳಿಗ್ಗೆ ವಾರ್ಷಿಕ ಪೂಜೆ ನೆರವೇರಿತು. ಹಿರಿಯರಾದ ಡಾ| ಪ್ರಭಾಕರ್ ಭಟ್ ಕಲ್ಲಡ್ಕ, ಡಾ. ಕಮಲಾ ಪ್ರಭಾಕರ್ ಭಟ್ ಕಲ್ಲಡ್ಕ, ವಿಭಾಗ ಪ್ರಮುಖರು, ಬೋಧಕ, ಬೋಧೇ-ಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ವಿಶ್ವ ಸಾಗರ ದಿನ : 8.06.2024

ವಿಶ್ವಸಾಗರ ದಿನಾಚರಣೆಯನ್ನು ಆಚರಿಸಲಾಯಿತು. ದಿನದ ಮಹತ್ವವನ್ನು ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಸಹ ಮುಖ್ಯೋಪಾಧ್ಯಯರಾದ ಶ್ರೀ ಸುಮಂತ್ ಆಳ್ವ ಎಂ ಹಾಗೂ ಹಿರಿಯ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಉಪಸ್ಥಿತರಿದ್ದರು.

### ಹೆಣ್ಣು ಮಕ್ಕಳಿಗೆ ಆರೋಗ್ಯ ಮಾಹಿತಿ: 13.6.2024



"ಹೆಣ್ಣು ಮಕ್ಕಳಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯದ "ಬಗ್ಗೆ ಬಾಲಕಿಯರಿಗೆ ಶಾಲೆಯ ಹಿರಿಯ ಅಧ್ಯಾಪಕಿಯಾದ ಶ್ರೀಮತಿ ಅನ್ನಪೂರ್ಣ ಹಾಗೂ ಸಹಶಿಕ್ಷಕಿಯಾದ ಶ್ರೀಮತಿ ರಾಜೇಶ್ವರಿ ಮಾಹಿತಿಯನ್ನು ನೀಡಿ-ದರು.

### ಭಜನೆ - ಸಾಮೂಹಿಕ ಹುಟ್ಟುಹಬ್ಬ : 15.6.24



ವೇದವ್ಯಾಸ ಧ್ಯಾನಮಂದಿರದಲ್ಲಿ ಭಜನೆ ಹಾಗೂ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ 7ನೇ ತರಗತಿಯ ವಿದ್ಯಾರ್ಥಿಗಳು ಭಜನೆ ಮಾಡಿದರು. ಪದವಿ ವಿಭಾಗದ ಕನ್ನಡ ಉಪನ್ಯಾಸಕರಾದ ಶ್ರೀ ಯತಿರಾಜ್ ಇವರು ಭಜನೆ ಹಾಗೂ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿದರು. ಹುಟ್ಟುಹಬ್ಬ ಆಚರಿಸಿಕೊಳ್ಳುವ ಮಕ್ಕಳಿಗೆ ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕ ಧಾರಣೆ ಮಾಡಿ, ಸಿಹಿ ನೀಡಲಾಯಿತು. ವೇದಿಕೆಯಲ್ಲಿ ವಾರಣಾಸಿ ಹೃಷಿಕೇಶ ಯೋಗಾಶ್ರಮದ

ಯೋಗ ಗುರುಗಳಾದ ಶ್ರೀ ಪ್ರಕಾಶಾನಂದ, ಶ್ರೀ ಸುಮಂತ್ ಶ್ರೀಮಾನ್ ಉಪಸ್ಥಿತರಿದ್ದರು.

**"ಮನೆಗೊಂದು ಗಿಡ" ಅಭಿಯಾನ: 17.06.2024**

ವಿಶ್ವಪರಿಸರ ದಿನಾಚರಣೆಯ ಅಂಗವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಮನೆಯಲ್ಲಿ ಫಲಕೊಡುವ ಗಿಡವನ್ನು ಪೋಷಕರ ಸಹಕಾರದೊಂದಿಗೆ ನೆಟ್ಟು "ಮನೆಗೊಂದು ಗಿಡ" ಅಭಿಯಾನದಲ್ಲಿ ಪಾಲ್ಗೊಂಡರು.

**ಶಾಲಾ ಸಂಸತ್ ಚುನಾವಣೆ : 18.06.024**



2024–25ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಸತ್ ಚುನಾವಣೆ ನಡೆಯಿತು. ಒಟ್ಟು 10 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಚುನಾವಣೆಗೆ ನಿಂತಿದ್ದು, ಎಲ್ಲಾ ವಿದ್ಯಾರ್ಥಿಗಳು ಸರದಿ ಸಾಲಿನಲ್ಲಿ ನಿಂತು ತಮ್ಮ ತಮ್ಮ ಹಕ್ಕನ್ನು ಚಲಾಯಿಸಿದರು.

**ಹಿಂದೂ ಸಾಮ್ರಾಜ್ಯೋತ್ಸವ : 19.06.2024**



ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ ಭಾರತ ಮಾತೆಗೆ ಹಾಗೂ ಛತ್ರಪತಿ ಶಿವಾಜಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಶಿವಾಜಿಯ ಜೀವನ ಚರಿತ್ರೆಯನ್ನು "ಶ್ರೀರಾಮ ಪದವಿ ಪೂರ್ವ ವಿಭಾಗದ ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಇವರು ಮಕ್ಕಳಿಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಸಹಮುಖ್ಯೋಪಾಧ್ಯಾಯರಾದ ಸುಮಂತ್ ಆಳ್ವ ಶ್ರೀಮಾನ್ ಉಪಸ್ಥಿತರಿದ್ದರು.

**ವಿಶ್ವಯೋಗ ದಿನ : 21.06.2024**

ವಿಶ್ವ ಯೋಗ ದಿನದ ಮಹತ್ವವನ್ನು ವಿಶ್ವ ಹಿಂದೂ ಪರಿಷತ್‌ನ ಶ್ರೀಸೀತಾರಾಮ ಭಟ್ ತಿಳಿಸಿಕೊಟ್ಟರು. ಯೋಗ ಶಿಕ್ಷಕಿಯಾದ ಕು.ದೇವಕಿ ಯೋಗ ಪ್ರತಿಜ್ಞೆಯನ್ನು ಮಾಡಿಸಿದರು. ವಿದ್ಯಾರ್ಥಿಗಳು ಯೋಗ ನೃತ್ಯವನ್ನು ಮಾಡುವುದರ ಮೂಲಕ ಯೋಗಕ್ಕೆ ಚಾಲನೆ ನೀಡಿದರು. ನಂತರ ಅಧ್ಯಾಪಕರ ವೃಂದದವರಿಂದ ಯೋಗಭ್ಯಾಸ ನಡೆಸಲಾಯಿತು. ಆಡಳಿತ ಮಂಡಳಿಯ ಆಹ್ವಾನಿತ ಸದಸ್ಯರಾದ ಶ್ರೀಅಜಿತ್ ಅಧ್ಯಾಪಕರ ಜೊತೆ ಯೋಗದಲ್ಲಿ ಪಾಲ್ಗೊಂಡರು. ನಂತರ ವಿದ್ಯಾಥಿಗಳಿಗೆ ಯೋಗಭ್ಯಾಸ ನಡೆಸಲಾಯಿತು. ವೇದಿಕೆಯಲ್ಲಿ ಸಹಮುಖ್ಯೋಪಾಧ್ಯಾಯರಾದ ಶ್ರೀಸುಮಂತ್ ಆಳ್ವ ಎಂ, ಪೂರ್ವಗುರುಕುಲ ಪ್ರಮುಖರಾದ ಶ್ರೀಮತಿ ರೂಪಕಲಾ ಉಪಸ್ಥಿತರಿದ್ದರು.

**ಮನೆಮನೆಯಲ್ಲಿ ಯೋಗ : 21.06.2024**



ಮನೆಮನೆಯಲ್ಲಿ ಯೋಗ ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಶಾಲೆಯಲ್ಲಿ ಯೋಗ ತರಗತಿಯಲ್ಲಿ ಕಲಿಸಿಕೊಟ್ಟ ಯೋಗಭ್ಯಾಸವನ್ನು ವಿದ್ಯಾರ್ಥಿಗಳು ಮನೆಯವರಿಗೆ ಕಲಿಸಿಕೊಟ್ಟು ಮನೆಯವರೊಂದಿಗೆ ಪ್ರಾತಃಕಾಲದಲ್ಲಿ ಯೋಗಭ್ಯಾಸವನ್ನು ಮಾಡುವ ಮೂಲಕ ನೂರಾರು ವಿದ್ಯಾರ್ಥಿಗಳು ಅಭಿಯಾನದಲ್ಲಿ ಕೈಜೋಡಿಸಿ ಯಶಸ್ವಿಗೊಳಿಸಿದರು. ಈ ಮೂಲಕ ವಿದ್ಯಾರ್ಥಿಗಳ ಪೋಷಕರು ವಿಶ್ವ–ಯೋಗ ದಿನದಲ್ಲಿ ಭಾಗಿಯಾಗುವ ಮೂಲಕ ಮಾದರಿಯಾದರು.

**ಅಭಿನಂದನೆ : 22.06.2024**

2024–25ನೇ ಶೈಕ್ಷಣಿಕ ವರ್ಷದ ಶಾಲಾ ಸಂಸತ್ ಚುನಾವಣೆ ನಡೆದಿದ್ದು, ವಿಜೇತರಾದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು. ಶಾಲಾನಾಯಕಿಯಾಗಿ ಭೂಮಿಕಾ, ನಾಯಕನಾಗಿ ಶಶಾಂಕ್, ಉಪಮುಖ್ಯಮಂತ್ರಿಯಾಗಿ ಪ್ರಾಪ್ತಿ ಹಾಗೂ ಶಮಿತ್, ಶಿಕ್ಷಣ ಮಂತ್ರಿಯಾಗಿ ನಿವಾನ್ ಹಾಗೂ ರಾಜೇಶ್ವರಿ, ಆರೋಗ್ಯ ಮಂತ್ರಿಯಾಗಿ ನಿಶಾಂತ್ ಹಾಗೂ ವಂಶಿಕ, ಸ್ವಚ್ಛತಾ ಮಂತ್ರಿಯಾಗಿ ಚಿನ್ಮಯಿ ಹಾಗೂ ಘನಶ್ಯಾಮ್, ವಾರ್ತಾಮಂತ್ರಿಯಾಗಿ ಜಾನ್ವಿ ಎಸ್ ಪಿ, ಹಾಗೂ ಶ್ರವಣ್, ಸಾಂಸ್ಕೃತಿಕ ಮಂತ್ರಿಯಾಗಿ ಲತಿಕಾ ಹಾಗೂ ಸಾತ್ವಿಕ್, ಕೃಷಿ ಮಂತ್ರಿಯಾಗಿ ಧಾತ್ರಿ ಹಾಗೂ ಭರತ್, ಕ್ರೀಡಾ ಮಂತ್ರಿಯಾಗಿ ಸುಹಾನ್ ಹಾಗೂ ಮಾನಸ, ನೀರಾವರಿ ಮಂತ್ರಿಯಾಗಿ ಭುವನ್ ಹಾಗೂ ಲಘುವಿ ಆಯ್ಕೆಗೊಂಡಿರುತ್ತಾರೆ. ವಿರೋಧ ಪಕ್ಷದ ನಾಯಕನಾಗಿ ಆರ್ಯನ್, ನಾಯಕಿಯಾಗಿ ವರ್ಷ, ಸಭಾಪತಿಯಾಗಿ ಸುಶ್ಮಿತಾ ಭಟ್ ಆಯ್ಕೆ ಆಗಿರುತ್ತಾರೆ.

## ಪ್ರೌಢಶಾಲೆ

**ಯೋಗ ಸಪ್ತಾಹ** 10–06–2024

ಮಧುಕರ ಸಭಾಂಗಣದಲ್ಲಿ ಯೋಗ ಗುರುಗಳಾದ ಶ್ರೀ ಪ್ರಕಾಶ ಆನಂದ್ ಗುರೂಜಿಯವರು ಯೋಗ ಸಪ್ತಾಹವನ್ನು ಪ್ರಾರಂಬಿಸಿದರು. ಇವರು ವಾರಣಾಸಿ ಯೋಗಾಶ್ರಮದಲ್ಲಿ ಯೋಗಗುರೂಜಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಕಳೆದ 40 ವರ್ಷಗಳಿಂದ ಕರ್ನಾಟಕದಾದ್ಯಂತ ಯೋಗ ತರಬೇತಿ ನೀಡುತ್ತಾ ಬಂದಿದ್ದಾರೆ.

**ಸಂಸ್ಕೃತ ಸಂಭಾಷಣ ಶಿಬಿರ** 11.06.2024

ಶ್ರೀಮತಿ ಅನ್ನಪೂರ್ಣ ಮಾತಾಜಿ ದೀಪ ಪ್ರಜ್ವಲಿಸುವ ಮೂಲಕ ಶಿಬಿರ–ಕ್ಕೆ ಚಾಲನೆಯನ್ನು ನೀಡಿ ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿದರು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ ಎಂ. ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಯೋಗ ದಿನಾಚರಣೆ 21.06.24**




10ನೇ ಅಂತರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ, ಗೋಳ್ತಮಜಲು ಗ್ರಾಮ ಪಂಚಾಯಿತಿ ಸದಸ್ಯೆ ಹಾಗೂ ಶ್ರೀರಾಮ ಮಂದಿರ ಕಲ್ಲಡ್ಕದ ವರಮಹಾಲಕ್ಷ್ಮಿ ಪೂಜಾ

ಸಮಿತಿಯ ಅಧ್ಯಕ್ಷರಾಗಿರುವ ಶ್ರೀಮತಿ ಲಖಿತಾ ಆರ್ ಶೆಟ್ಟಿ, ಶ್ರೀ ರಾಜಾರಾಮ್ ಐತಾಳ್ (ಜೀವನ ಕಲೆ ಪ್ರತಿಷ್ಠಾನ ಬಂಟ್ವಾಳ ಘಟಕದ ಯೋಗ ಶಿಕ್ಷಕರು), ರಾಷ್ಟ್ರ ಸೇವಿಕಾ ಸಮಿತಿ ಬಂಟ್ವಾಳ ತಾಲೂಕಿನ ಕಾರ್ಯವಾಹರಾಗಿರುವ ಶ್ರೀಮತಿ ಪಣಿಪ, ವಿದ್ಯಾಕೇಂದ್ರದ ಸಹ ಸಂಚಾಲಕರಾದ ಶ್ರೀ ರಮೇಶ್ ಎನ್, ಯೋಗ ಗುರುಗಳಾದ ಶ್ರೀ ಪ್ರಕಾಶಾನಂದ ಗುರೂಜಿ ಉಪಸ್ಥಿತರಿದ್ದರು. ಯೋಗ ಸಪ್ತಾಹ ತರಬೇತಿಯನ್ನು ನೀಡಿದ ಯೋಗ ಗುರುಗಳಿಗೆ ಗುರುವಂದನೆ ಸಲ್ಲಿಸಲಾಯಿತು. ವಿದ್ಯಾರ್ಥಿಗಳಿಗೆ ಸಂಕಲ್ಪ ಪ್ರತಿಜ್ಞೆಯನ್ನು ಮಾಡಲಾಯಿತು. ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷತೆಯನ್ನು ಮಾಡಿಸಲಾಯಿತು.

**ಶ್ರೀರಾಮ ವನದಲ್ಲಿ ವಿದ್ಯಾರ್ಥಿಗಳಿಂದ ಶ್ರಮದಾನ**

ಪ್ರೌಢಶಾಲೆ ಗಮನಿಸುತ್ತಿರುವ ಗ್ರಾಮವನ-ಶ್ರೀರಾಮವನದಲ್ಲಿ ವಿದ್ಯಾರ್ಥಿಗಳಿಂದ ಶ್ರಮದಾನ, ಸ್ವಚ್ಛತೆ, ಗಿಡ ನೆಡುವ ಕಾರ್ಯಕ್ರಮ ನಡೆಯಿತು.

**ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ**

ದಿನಾಂಕ 12.06.2024 ರಂದು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಕುರಿತು ಶ್ರೀಯುತ ಜಿನ್ನಪ್ಪ ಶ್ರೀಮಾನ್ ಇವರು ವಿದ್ಯಾರ್ಥಿಗಳಿಗೆ ಬಾಲಕಾರ್ಮಿಕ ಪದ್ಧತಿಯ ಕುರಿತು ಸವಿವರವಾಗಿ ತಿಳಿಸಿದರು." ವಿದ್ಯಾರ್ಥಿಗಳಿಗೆ ಶಿಕ್ಷಣ ಅಗತ್ಯ ಹಾಗಾಗಿ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕೆಂದು" ಕಿವಿಮಾತು ತಿಳಿಸಿದರು.

**ಘೋಷ್ ವಾದನದ ಪರಿಕರಗಳ ಪರಿಚಯ 22.6.24**

ಮಧುಕರ ಸಭಾಂಗಣದಲ್ಲಿ ಶ್ರೀ ಉಮೇಶ್ ಕುಲಕರ್ಣಿ ಘೋಷ್ ವಾದನದ ವಿವಿಧ ಪರಿಕರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.

**ಹದಿ ಹರೆಯರಿಗೆ ಆಪ್ತ ಸಲಹೆ 22.6.24**

ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಹದಿಹರೆಯದ ಬಾಲಕರ ಸಮಸ್ಯೆಗಳನ್ನು ತಿಳಿಸಿ, ಆಪ್ತ ಸಲಹೆ ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿದರು.

**ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ 29.06.2024**



ಮಧುಕರ ಸಭಾಂಗಣದಲ್ಲಿ ನಡೆದ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ, ಕುದುರೆಬೆಟ್ಟು ಮಣಿಕಂಠ ಭಜನಾ ಮಂದಿರದ ಅಧ್ಯಕ್ಷರು, ಕಲ್ಲಡ್ಕ ರೈತರ ಸೇವಾ ಸಹಕಾರಿ ಸಂಘದ ನಿರ್ದೇಶಕರು ಶ್ರೀ ಲೋಕಾನಂದ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಪ್ರೇಮ ಲೋಕಾನಂದ ಹಾಗೂ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ ಎಂ. ಉಪಸ್ಥಿತರಿದ್ದರು. ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸುವ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಸಮರ್ಪಣಾ ನಿಧಿಯನ್ನು ಅರ್ಪಿಸಿ, ಅತಿಥಿಗಳಿಂದ ತಿಲಕಧಾರಣೆ ಮತ್ತು ಆಶೀರ್ವಾದ ಪಡೆದುಕೊಂಡರು.

## ಸೆಕೆಂಡರಿ ಸ್ಕೂಲ್

**ಹಿಂದೂ ಸಾಮ್ರಾಜ್ಯ ದಿನೋತ್ಸವ 20.06.2024**

ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ದೀಪ ಬೆಳಗಿಸಿ ಭಾರತ ಮಾತೆಗೆ ಹಾಗೂ ಛತ್ರಪತಿ ಶಿವಾಜಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಹತ್ತನೇ ತರಗತಿಯ ವಿದ್ಯಾರ್ಥಿನಿಯರಾದ ಕುಮಾರಿ ಧನ್ವಿತಾ ಮತ್ತು ಕುಮಾರಿ ಗೌತಮಿ ಇವರು ಶಿವಾಜಿಯ ಜೀವನ ಚರಿತ್ರೆಯ ಕುರಿತು ಮಾತನಾಡಿದರು. ಎಲ್ಲಾ ಶಿಕ್ಷಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಯೋಗ ದಿನಾಚರಣೆ ವರದಿ 21.06.2023**

ಹತ್ತನೇ ವರ್ಷದ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಕರುಣಾಕರ ಉಪಾಧ್ಯಾಯ ಶ್ರೀ ಓಂಕಾರ ಯೋಗ ಮಂದಿರ ಪುತ್ತೂರು, ಯೋಗ ವರ್ಷದಲ್ಲಿ ಒಂದು ದಿನಕ್ಕೆ ಸೀಮಿತವಾಗಿರದೆ ಜೀವನದ ಒಂದು ಅವಿಭಾಜ್ಯ ಅಂಗವಾಗಿರಬೇಕು ಮತ್ತು ಪ್ರೇರಣದಾಯಕವಾಗಿರಬೇಕು, ಎಂದು ಇವರು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ತಿರುಮಲೇಶ್ವರ ಪ್ರಶಾಂತ್ ಇವರು ವಹಿಸಿಕೊಂಡರು, ನಮ್ಮ ಶಾಲೆಯ ಒಟ್ಟು 128 ವಿದ್ಯಾರ್ಥಿಗಳು ಈ ಯೋಗಭ್ಯಾಸದಲ್ಲಿ ಭಾಗವಹಿಸಿದರು. ವಿದ್ಯಾರ್ಥಿಗಳಾದ ಕುಮಾರಿ ಗೌತಮಿ ನಿರೂಪಿಸಿ, ಕುಮಾರಿ ಮನ್ವಿತಾ ಸ್ವಾಗತಿಸಿ, ಕುಮಾರಿ ಮನಾಲಿ ವಂದಿಸಿದರು.

**ಶಾಲಾ ಸಂಸತ್ತಿನ ಚುನಾವಣೆ 26.6.2024**



ಶಾಲಾ ಸಂಸತ್ತಿನ ಚುನಾವಣೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ತಮ್ಮ ಅಮೂಲ್ಯವಾದ ಮತವನ್ನು EVM Appನ ಮೂಲಕ ಚಲಾಯಿಸಿದರು. ಮತ ಎಣಿಕೆ ಪೂರ್ಣಗೊಂಡು ವಿಜೇತರಾದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು. ಶಾಲಾ ಮುಖ್ಯಮಂತ್ರಿಯಾಗಿ ಚನ್ನಬಸವ ರೆಡ್ಡಿ, ಉಪ ಮುಖ್ಯಮಂತ್ರಿಯಾಗಿ ಭುವನ್ ಕಲ್ಯಾಣ್ ಹಾಗೂ ಸಾಂಸ್ಕೃತಿಕ ಮಂತ್ರಿಯಾಗಿ ಹರಿಣಿ ಹಾಗೂ ಕ್ರೀಡಾ ಮಂತ್ರಿಯಾಗಿ ರೋಹಿತ್ ಆಯ್ಕೆಗೊಂಡಿರುತಾರೆ. ಈ ಸಂದರ್ಭದಲ್ಲಿ ಶಾಲಾ ಸಂಚಾಲಕರಾದ ಶ್ರೀಯುತ ವಸಂತ ಮಾಧವ ಹಾಗೂ ಉಪಪ್ರಾಂಶುಪಾಲರಾದ ತಿರುಮಲೇಶ್ವರ ಪ್ರಶಾಂತ್ ಇವರು ಮಕ್ಕಳಿಗೆ ಶುಭ ಹಾರೈಸಿದರು.

## ಪದವಿ ಪೂರ್ವ

**ವಿಶ್ವ ಪರಿಸರ ದಿನಾಚರಣೆ 06.06.2024**

ಅಜಿತ ಕುಮಾರ ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀರಾಮ ಪದವಿ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕರಾದ ಶ್ರೀ ಯತಿರಾಜ್ ಶ್ರೀಮಾನ್ ಪರಿಸರ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಹಿರಿಯ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮೀ ಮಾತಾಜಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಮಾಜಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ದೀಪಿಕಾ ಮಾತಾಜಿ ನಿರ್ವಹಿಸಿದರು.

**ಉಪನ್ಯಾಸಕರ ಸಭೆ 19.6.2024**

ಪದವಿ ಪೂರ್ವ ವಿಭಾಗದಲ್ಲಿ ಉಪನ್ಯಾಸಕರ ಸಭೆ ಮತ್ತು ಛತ್ರಪತಿ ಶಿವಾಜಿ ಪಟ್ಟಾಭಿಷೇಕದ ದಿನಾಚರಣೆಯನ್ನು ಆಚರಿಸಲಾಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರಿನ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ, ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಕೋಶಾಧಿಕಾರಿಗಳಾದ ಶ್ರೀ ಸತೀಶ್ ಭಟ್ ಶಿವಗಿರಿ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಮತ್ತು ಉಪನ್ಯಾಸಕ–ಉಪನ್ಯಾಸಕೇತರರು ಉಪಸ್ಥಿತರಿದ್ದರು. ಉಪನ್ಯಾಸಕರ ಸಭೆಯಲ್ಲಿ ದ್ವಿತೀಯ ಪಿಯುಸಿ ಫಲಿತಾಂಶದ ಬಗ್ಗೆ ಅವಲೋಕನ ನಡೆಸಲಾಯಿತು. ಅದೇ ರೀತಿ ಹಿರಿಯರು ಶಿವಾಜಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿ, ಶಿವಾಜಿಯ ಪ್ರೇರಣೆ ಮತ್ತು ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸುವಂತೆ ನಾವು ಪ್ರೇರೇಪಿಸಬೇಕು ಎಂದು ತಿಳಿಸಿದರು.

**ವಿಶ್ವ ಯೋಗ ದಿನಾಚರಣೆ 21.6.2024**

ವಿಶ್ವ ಯೋಗ ದಿನಾಚರಣೆಯಲ್ಲಿ ಶ್ರೀ ಸುದರ್ಶನ್, ವ್ಯವಸ್ಥಾಪಕರು ಆಯುಷ್ಮಾನ್ ಯೋಗಸಂಸ್ಥೆ ಸಜಿಪಮೂಡ ಇವರು ಯೋಗ ದಿನಾಚರಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವೇದಿಕೆಯಲ್ಲಿ ಶ್ರೀ ರೋಷನ್ ಹೆಗ್ಡೆ ಮತ್ತು ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಗಣಕವಿಜ್ಞಾನ ಉಪನ್ಯಾಸಕಿ ಶ್ರೀಮತಿ ಚೈತನ್ಯ ಮಾತಾಜಿ ನಿರ್ವಹಿಸಿದರು

**ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ 29.6.2024**



ಜೂನ್ ತಿಂಗಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮವನ್ನು ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿ – ವಿದ್ಯಾರ್ಥಿನಿಯರು ನಡೆಸಿದರು. ಹುಟ್ಟುಹಬ್ಬ ಆಚರಿಸಿದ ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಮಾತಾಜಿಯವರಿಂದ ಆರತಿ ಬೆಳಗಿಸಿ ಶುಭ ಹಾರೈಸಲಾಯಿತು.

## ಪದವಿ

**ನ್ಯಾಷನಲ್ ಸೆಮಿನಾರ್ ನಲ್ಲಿ ಭಾಗಿ 06.06.2024**



ಉಡುಪಿಯ MGM ಕಾಲೇಜಿನಲ್ಲಿ "Human values in Literature" ಎಂಬ ವಿಷಯದ ಕುರಿತು ನಡೆದ ಒಂದು ದಿನದ ವಿವಿಧ ಭಾಷೆಗಳ ನ್ಯಾಷನಲ್ ಸೆಮಿನಾರ್ ನಲ್ಲಿ ಶ್ರೀರಾಮ ಪದವಿ ವಿಭಾಗದ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನಾ ಇವರು ಭಾಗವಹಿಸಿ "ತೈತ್ತಿರೀಯ ಉಪನಿಷತ್ತಿನಲ್ಲಿ ಮಾನವೀಯ ಮೌಲ್ಯಗಳು" ಎಂಬ ವಿಷಯವನ್ನು ಮಂಡಿಸಿದರು. ಹಾಗೂ ಪ್ರಥಮ ಬಿಕಾಂ ವಿದ್ಯಾರ್ಥಿನಿ ಕು. ಶರಣ್ಯಶ್ರೀ ಭಾಗವಹಿಸಿದರು.

**ಭಜನಾ ಕಾರ್ಯಕ್ರಮ 10.06.2024**



ಶ್ರೀರಾಮ ಪದವಿ ವಿಭಾಗದ ಆಜಾದ್ ಭವನದಲ್ಲಿ ತೃತೀಯ ವರ್ಷದ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ಒಂದು ಗಂಟೆಯ ಅವಧಿಯಲ್ಲಿ ಸುಮಾರು 8–10 ಭಜನೆಗಳನ್ನು ಹಾಡಿದರು. ನೈವೇದ್ಯ, 13 ಬಾರಿ ಶ್ರೀರಾಮ ನಾಮ ತಾರಕ ಜಪ ಹಾಗೂ ಮಂಗಳಾರತಿ ಮಾಡಿ ಕೊನೆಗೊಳಿಸಲಾಯಿತು.

**ವಿಶ್ವ ಯೋಗ ದಿನಾಚರಣೆ 21.06.2024**

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ವಿಶ್ವ ಯೋಗ ದಿನಾಚರಣೆಯನ್ನು ಆನ್ಲೈನ್ ಮೂಲಕ ಆಚರಿಸಲಾಯಿತು. ವಿಶ್ವಯೋಗ ದಿನದ ಮಹತ್ವವನ್ನು ಯೋಗ ಶಿಕ್ಷಕಿಯಾದ ಕುಸುಮ ಜಗದೀಶ್ ಪಾಣೆಮಂಗಳೂರು ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪದವಿ ವಿಭಾಗದ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಯತಿರಾಜ್ ಪಿ. ಸಹ ಯೋಜನಾಧಿಕಾರಿ ಕು. ದೀಕ್ಷಿತ ಉಪಸ್ಥಿತರಿದ್ದರು. ಪ್ರಥಮ ವಾಣಿಜ್ಯ ವಿಭಾಗದ ಧನುಶ್ರೀ ವಂದಿಸಿ, ದ್ವಿತೀಯ ವಾಣಿಜ್ಯ ವಿಭಾಗದ ಪುನೀತಾ ಸ್ವಾಗತಿಸಿ, ನಿರೂಪಿಸಿದರು.

**ವಿಶ್ವವಿದ್ಯಾನಿಲಯದ ಸ್ಥಳೀಯ ವಿಚಾರಣಾ ಸಮಿತಿ ಕಾಲೇಜಿಗೆ ಭೇಟಿ 11.06.2024**




ಮಂಗಳೂರು ವಿಶ್ವವಿದ್ಯಾನಿಲಯದ ಸ್ಥಳೀಯ ವಿಚಾರಣಾ ಸಮಿತಿಯ ಸದಸ್ಯರು 2024–25ನೇ ಶೈಕ್ಷಣಿಕ ವರ್ಷದ ಅನುಮತಿಗಾಗಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿತು. ಇದರ ಮುಖ್ಯಸ್ಥರಾಗಿ ಶ್ರೀ ಗಣೇಶ್ ಸಂಜೀವ್ ಹಾಗೂ ವಿದ್ಯಾಕೇಂದ್ರದ ಅಧ್ಯಕ್ಷರು ಜೊತೆಗಿದ್ದರು.

**ಗಾನರಥ – 2024 ಚಲನಚಿತ್ರ ಗಾಯನ ಸ್ಪರ್ಧೆಯಲ್ಲಿ ಭಾಗಿ – 15.6.2024**

ಡಾ. ಪಿ. ದಯಾನಂದ ಪೈ – ಸತೀಶ್ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜು ರಥಬೀದಿ ಮಂಗಳೂರು ಇಲ್ಲಿ ನಡೆದ ಗಾನರಥ – 2024 ಚಲನಚಿತ್ರ ಗಾಯನ ಸ್ಪರ್ಧೆ ಯಲ್ಲಿ ನಮ್ಮ ಕಾಲೇಜು ನ ಚೈತ್ರ. ಪಿ ಮತ್ತು ಕೌಶಿಕ್ ಫೈನಲ್ ಬಿಕಾಂ ಇವರು ಭಾಗವಹಿಸಿದ್ದರು.

**ಅಗ್ನಿ ನಿರ್ವಹಣೆ ಮತ್ತು ಅಗ್ನಿಶಾಮಕದ ಬಗ್ಗೆ ತರಬೇತಿಯಲ್ಲಿ ಭಾಗಿ**



ತಾ. 28.06.2024 ಮತ್ತು 29/06/2024 ರಂದು ಮಂಗಳೂರು ಕದ್ರಿ ಅಗ್ನಿಶಾಮಕ ಠಾಣಾ ಕಟ್ಟಡದಲ್ಲಿ ಎರಡು ದಿನ ಅಗ್ನಿ ನಿರ್ವಹಣೆ ಮತ್ತು ಅಗ್ನಿಶಾಮಕದ ಬಗ್ಗೆ ತರಬೇತಿ ನಡೆಯಿತು. ಈ ತರಬೇತಿಯಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಪಾಲಕಿಯಾದ ಶ್ರೀಮತಿ ಸಹನಾ ಮಾತಾಜಿ ಇವರು ಭಾಗವಹಿಸಿರುತ್ತಾರೆ.

## – ಸೆಕೆಂಡರಿ ಸ್ಕೂಲ್ –



ಕಲ್ಲಡ್ಕ ಶ್ರೀ ರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಬಾಳ್ತಿಲ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಡೆಂಗ್ಯೂ ಮತ್ತು ಮಲೇರಿಯಾ ನಿಯಂತ್ರಣದ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಮಾಹಿತಿ ಕಾರ್ಯಾಗಾರವನ್ನು ಶುಶ್ರೂಷಕಿ ಶ್ರೀಮತಿ ಸರಸ್ವತಿ ಇವರು ನಡೆಸಿಕೊಟ್ಟರು. ವಿದ್ಯಾರ್ಥಿ–ವಿದ್ಯಾರ್ಥಿನಿಯರು ಇದರ ಸದುಪಯೋಗವನ್ನು ಪಡೆದುಕೊಂಡರು.

## – ಪದವಿಪೂರ್ವ –



**ವಿದ್ಯಾರ್ಥಿ ಸಂಘದ ಚುನಾವಣೆ 22.6.2024**

ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ 627 ವಿದ್ಯಾರ್ಥಿಗಳು ಮತವನ್ನು ಚಲಾಯಿಸಿದರು. ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮೀ ಕೆ. ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಅಧ್ಯಕ್ಷರಾಗಿ ಕೌಶಿಕ್ ವಾಣಿಜ್ಯ ವಿಭಾಗ 'ರಾಮತೀರ್ಥ', ಕಾರ್ಯದರ್ಶಿಯಾಗಿ ಚೇತನ್ ಕೆ ಯು ವಾಣಿಜ್ಯ ವಿಭಾಗ 'ದಧೀಚಿ', ಸಹಕಾರ್ಯದರ್ಶಿಯಾಗಿ ಸುಜನ್ಯ ಜೆ ವಾಣಿಜ್ಯ ವಿಭಾಗ 'ದಧೀಚಿ' ಆಯ್ಕೆಯಾದರು.




**ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜವಾಬ್ದಾರಿ ಘೋಷಣೆ 17.6.2024**

ಸೋಮವಾರ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಬಂಟ್ವಾಳ ತಾಲೂಕು ಸಮಿತಿ ಜವಾಬ್ದಾರಿ ಘೋಷಣೆ ಮತ್ತು ಉಪನ್ಯಾಸ ಕಾರ್ಯಕ್ರಮ ನಡೆಯಿತು. ಆರಂಭದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಂದ ಸ್ವರಚಿತ ಪರಿಸರ ಜಾಗೃತಿ ಕವನ ವಾಚನ, ಬಳಿಕ ಹಿರಿಯ ಕವಿಗಳ ಕವನ ವಾಚನ ಕಾರ್ಯಕ್ರಮ ನೆರವೇರಿತು. ಉಪನ್ಯಾಸ ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ವಹಿಸಿದ್ದರು. ರಾಮಕುಂಜೇಶ್ವರ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಗಣರಾಜ ಕುಂಬ್ಳೆ ಉಪನ್ಯಾಸ ನೀಡಿ–ದರು. ಕಾರ್ಯಕ್ರಮದಲ್ಲಿ ಪ್ರೊ ರಾಜಮಣಿ ರಾಮಕುಂಜ, ಡಾ.ಸುರೇಶ ನೆಗಳಗುಳಿ, ಶ್ರೀ ಜಯಾನಂದ ಪೆರಾಜೆ, ಶ್ರೀಮತಿ ಸೀತಾಲಕ್ಷ್ಮಿ ವರ್ಮ, ಶ್ರೀಮತಿ ಮಧುರಾ ಕಡ್ಯ, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ, ಪ್ರೌಢ ವಿಭಾಗದ ಮುಖ್ಯ ಶಿಕ್ಷಕರಾದ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು.

## – ಪದವಿ –




**26.06.2024 ಮಿನಿ ಪ್ರಾಜೆಕ್ಟ್ viva**

ದಿನಾಂಕ 26.06.2024 ರಂದು ಮಂಗಳೂರು ಕೆನರಾ ಕಾಲೇಜಿನ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಸಹ ಪ್ರಾಧ್ಯಾಪಕ ಪ್ರೊ. ಗಿರೀಶ್.ಕೆ. ಅವರು ಬಿಸಿಎ ವಿದ್ಯಾರ್ಥಿಗಳ ಮಿನಿ ಪ್ರಾಜೆಕ್ಟ್ vivaವನ್ನು ನಡೆಸಿಕೊಟ್ಟರು.




**ಮಾಹಿತಿ ಕಾರ್ಯಾಗಾರ 03.06.24.**

ಅಂತಿಮ ವರ್ಷದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ "Mcom ಕೋರ್ಸ್" ಕುರಿತು ಮಾಹಿತಿ ಕಾರ್ಯಾಗಾರ ಆಯೋಜಿಸಿದ್ದು ವಿವೇಕಾನಂದ ಕಾಲೇಜಿನ Mcom ಭಾಗದ ಉಪನ್ಯಾಸಕಿಯಾದ ಶ್ರೀಮತಿ. ಲಕ್ಷ್ಮಿ ಇವರು ಈ ಬಗ್ಗೆ ಸವಿಸ್ತಾರ ಮಾಹಿತಿ ನೀಡಿದರು. ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಸುಕನ್ಯಾ ಮಾತಾಜಿ ಹಾಗೂ ವಾಣಿಜ್ಯ ವಿಭಾಗದ ಉಪನ್ಯಾಸಕಿ ದೀಕ್ಷಿತ ಮಾತಾಜಿ ಉಪಸ್ಥಿತರಿದ್ದರು. ಕು.ಪ್ರತೀಕಾ ಸ್ವಾಗತಿಸಿ, ಕು. ನಿಶ್ಮಿತಾ ವಂದಿಸಿದರು.



**12.06.2024 ಮಿನಿ ಪ್ರಾಜೆಕ್ಟ್ viva**

VI ಸೆಮಿಸ್ಟರ್ ಬಿಕಾಂ ವಿದ್ಯಾರ್ಥಿಗಳಿಗೆ ಮಿನಿ ಪ್ರಾಜೆಕ್ಟ್ vivaವನ್ನು ಉಡುಪಿಯ ಪೂರ್ಣ ಪ್ರಜ್ಞಾ ಕಾಲೇಜಿನ ಪ್ರೊ.ಧನ್ಯಶ್ರೀ ಮತ್ತು ಮಂಗಳೂರು ಬೆಸೆಂಟ್ ಸಂಧ್ಯಾ ಕಾಲೇಜಿನ ಪ್ರೊ.ಶ್ರೀ ವಿದ್ಯಾ ನೇತೃತ್ವದಲ್ಲಿ ನಡೆಸಲಾಯಿತು.




**ವಿಶ್ವ ಪರಿಸರ ದಿನಾಚರಣೆ 05.06.2024.**

ಶ್ರೀರಾಮ ಪದವಿ ವಿಭಾಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ನೇತೃತ್ವದಲ್ಲಿ ಎಲ್ಲಾ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ತರಗತಿವಾರು ಫಲವಸ್ತುಗಳ ಗಿಡಗಳನ್ನು ನೆಟ್ಟು ಪರಿಸರ ದಿನಾಚರಣೆ ಆಚರಿಸಿದರು.



**ಕುದ್ಮುಲ್ ರಂಗರಾವ್ ಜನ್ಮದಿನಾಚರಣೆ 29.6.24**

ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜ ಸುಧಾರಕರಾದ ಕುದ್ಮುಲ್ ರಂಗರಾವ್ ಅವರ ಜನ್ಮದಿನದ ಪ್ರಯುಕ್ತ "ಕುದ್ಮುಲ್ ರಂಗರಾವ್ ಸ್ಮರಣೆ" ಕಾರ್ಯಕ್ರಮವನ್ನು ಆಚರಿಸಲಾಯಿತು. ಪ್ರಾಂಶುಪಾಲ ಕೃಷ್ಣ ಪ್ರಸಾದ್ ಕುದ್ಮುಲ್ ರಂಗರಾವ್ ಅವರ ಸಾಧನೆಯ ಬಗ್ಗೆ ಮಾಹಿತಿ ನೀಡಿದರು.



ಅಧ್ಯಯನ ಪ್ರವಾಸ 16.062024 ರಂದು ಮಾನವಿಕ ಸಂಘದ ವತಿಯಿಂದ ಬೇಲೂರು, ಹಳೇಬೀಡು ಮುಂಜ್ರಬಾದ್ ಕೋಟೆ ಇಲ್ಲಿಗೆ 23 ವಿದ್ಯಾರ್ಥಿಗಳು ಮತ್ತು 4 ಮಂದಿ ಉಪನ್ಯಾಸಕರನ್ನೊಳಗೊಂಡ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಯಿತು.



ಸಂಪನ್ಮೂಲ ವ್ಯಕ್ತಿಯಾಗಿ ಭಾಗಿ 26/06/2024

ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 25/06/2024 ಮತ್ತು 26/06/2024ರಂದು (2 ದಿನಗಳ) ವಿವೇಕಾನಂದ ವಿದ್ಯಾವರ್ಧಕ ಸಂಘದ ಪ್ರಾಥಮಿಕ, ಪ್ರೌಢ ಸಂಸ್ಕೃತ & ಕನ್ನಡ ಶಿಕ್ಷಕರಿಗಾಗಿ ಆಯೋಜಿಸಲಾಗಿದ್ದ ಪ್ರಶಿಕ್ಷಣ ವರ್ಗದಲ್ಲಿ ತಾ. 26ರಂದು ಶ್ರೀರಾಮ ಪದವಿ ಕಾಲೇಜಿನ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನಾ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ "ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳು" ಎಂಬ ವಿಷಯದ ಕುರಿತು ಅವಧಿ ನಡೆಸಿಕೊಟ್ಟರು.




ಸಮಗ್ರ ದ್ವಿತೀಯ ಬಹುಮಾನ 11.06.2024

ವಿವೇಕಾನಂದ ಕಾಲೇಜಿನಲ್ಲಿ ನಡೆದ ಅಂತರ್ ಕಾಲೇಜು ಮಟ್ಟದ ಕಾಮರ್ಸ್ ಫೆಸ್ಟ್ ನಲ್ಲಿ ನಮ್ಮ ಪದವಿ ವಿದ್ಯಾರ್ಥಿ ತಂಡವು ಒಟ್ಟು 5 ಸ್ಪರ್ಧೆಯಲ್ಲಿ ಭಾಗವಹಿಸಿ, ಮಾರ್ಕೆಟಿಂಗ್ ಸ್ಪರ್ಧೆಯಲ್ಲಿ ಗಗನ್ ಹಾಗೂ ಕರಣ್ ಪ್ರಥಮ ವಾಣಿಜ್ಯ ವಿಭಾಗ ದ್ವಿತೀಯ, "visionary expo" ಸ್ಪರ್ಧೆಯಲ್ಲಿ ಜಿತೇಶ್ ಹಾಗೂ ಪುನೀತ್ ದ್ವಿತೀಯ ವಾಣಿಜ್ಯ ವಿಭಾಗ ದ್ವಿತೀಯ ಹಾಗೂ "Innovation" ಸ್ಪರ್ಧೆಯಲ್ಲಿ ಶರಣ್ಯ ಹಾಗೂ ಐಶ್ವರ್ಯ ಪ್ರಥಮ ವಾಣಿಜ್ಯ ವಿಭಾಗ ದ್ವಿತೀಯ ಸ್ಥಾನ ಪಡೆದು ಸಮಗ್ರ ದ್ವಿತೀಯ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

## ವಿವಿಧ ವಿಭಾಗಗಳಲ್ಲಿ ವಿಶ್ವಯೋಗ ದಿನಾಚರಣೆ




















ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7.5% |
| 92ರಿಂದ 181 ದಿನಗಳು | – 8% |
| 182 ರಿಂದ 364 ದಿನಗಳು | – 9% |
| 1 ವರ್ಷ ಮತ್ತು ಮೇಲ್ಪಟ್ಟು | – 10% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24    Licensed to Post without pre-payment    License No: SK/WPP/PTR/117/2022-24

ಸರಯೂ

Vol. : 11    Issue :2    Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org    E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363